ಕರ್ನಾಟಕ ಸರ್ಕಾರ

# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ,ಪೋಡಿಯಂಬ್ಲಾಕ್,ವಿಶ್ವೇಶ್ವರಯ್ಯಕೇಂದ್ರ,ಡಾ||ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ:080-22864681/4604 ಫ್ಯಾಕ್ಸ್:080-2286 4619 ಇಮೇಲ್ :dof-blr-ka@nic.in

=======================================

ಸಂಖ್ಯೆ: DoF/TECH0BRS/51/2021 E-556845 ದಿನಾಂಕ:01/05/2022

## ಸುತ್ತೋಲೆ

**ವಿಷಯ:** ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು ಮಾರ್ಗಸೂಚಿ ಅನುಸಾರ ಅನುಷ್ಠಾನ ಮಾಡುವ ಬಗ್ಗೆ

************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಫಲಾನುಭವಿ ಆಧಾರಿತ ಘಟಕಗಳನ್ನು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಯವರು ಯೋಜನೆಯ ಮಾರ್ಗಸೂಚಿಯಂತೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೇಂದ್ರ ಕಚೇರಿಯಿಂದ ನೀಡಿದ ಗುರಿಗಳಂತೆ ಕಾರ್ಯದೇಶ ನೀಡಿ ಘಟಕ ಕಾಮಗಾರಿ ಪೂರ್ಣ ಮಾಡಿದ ನಂತರ ಆರ್ಥಿಕ ಮಂಜೂರಾತಿಗೆ ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಆದರೆ ಆರ್ಥಿಕ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸದಿರುವುದು ಕಂಡುಬಂದಿರುವ ಹಿನ್ನಲೆಯಲ್ಲಿ ಇನ್ನು ಮುಂದೆ ಆರ್ಥಿಕ ಮಂಜೂರಾತಿಗೆ ಕೇಂದ್ರ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಫಲಾನುಭವಿಗಳಿಗೆ ಸಂಬಂಧಿಸಿದ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಿದೆ.

1. ಜಮೀನಿನ ಪಹಣಿ ಪತ್ರ / ಸ್ಥಳದ ದಾಖಲೆ.
2. ಘಟಕ ನಿರ್ಮಾಣ ಮಾಡಿರುವ ಸ್ಥಳದ ಜಿ.ಪಿ.ಎಸ್ ಛಾಯಚಿತ್ರಗಳು (ಘಟಕ ನಿರ್ಮಾಣದ ಪೂರ್ವ / ನಿರ್ಮಾಣದ ಹಂತದಲ್ಲಿ / ಪೂರ್ಣವಾದ ನಂತರ).
3. ಫಲಾನುಭವಿಯು ಡಿ.ಎಲ್.ಸಿ ಸಭೆಯಲ್ಲಿ ಅನುಮೋದನೆಯಾಗಿರುವ ದೃಢೀಕೃತ ನಡವಳಿ ಪ್ರತಿ.
4. ಘಟಕ ನಿರ್ಮಾಣ / ಕಾಮಗಾರಿಗೆ ಮಾಡಿರುವ ವೆಚ್ಚದ ಬಗ್ಗೆ ಅಧೀಕೃತ ಬಿಲ್ಲುಗಳು.
5. ಸಿವಿಲ್ ಕಾಮಗಾರಿಯ ಕುರಿತು Chartered Engineer ರವರಿಂದ ಧೃಡೀಕರಣ ಮತ್ತು ವೆಚ್ಚಗಳ ಕುರಿತು Chartered Accountant ರವರು ನೀಡಿರುವ ಪ್ರಮಾಣ ಪತ್ರ.
6. ಘಟಕ ಪೂರ್ಣವಾಗಿರುವ ಬಗ್ಗೆ ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು/ ಮೀನುಗಾರಿಕೆ ಉಪ ನಿರ್ದೇಶಕರು ರವರ ಜಿಪಿ.ಎಸ್ ಛಾಯ ಚಿತ್ರದೊಂದಿಗೆ ಜಂಟಿ ಪರಿಶೀಲನಾ ವರದಿ.
7. ಅವಶ್ಯವಿರುವ ಘಟಕಗಳಿಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಹಾಗೂ ವ್ಯಾಪಾರ ಪರವಾನಿಗೆ.
8. ರೂ.200 ಛಾಪ ಕಾಗದದಲ್ಲಿ ನೋಟರಿಕೃತ ಕರಾರು ಪತ್ರ.

ವಿ.ಸೂ: ಈ ಮೇಲಿನ ದಾಖಲೆಗಳೊಂದಿಗೆ ಪ್ರಸ್ತಾವನೆಯಲ್ಲಿ ಘಟಕದಡಿ ಜಿಲ್ಲೆಗೆ ನಿಗದಿಪಡಿಸಿರುವ ಗುರಿಗಳಲ್ಲಿ ಲಭ್ಯವಿರುವ ಗುರಿಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸುವುದು.

ಮೀನುಗಾರಿಕೆ ನಿರ್ದೇಶಕರು

ಗೆ,

ಕರಾವಳಿ ಜಿಲ್ಲೆಗಳ ಜಂಟಿ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು: ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ